**ದಿಃ 21.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ– 2 ನೇ ಎದುರುದಾರರ ಪರ ವಕೀಲರಿಂದಃ–**

ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ ಎಂದರೆ ಸರಿ. ಅಪಘಾತವಾದ ಬಗ್ಗೆ ನನ್ನ ತಂದೆ ನನಗೆ ತಿಳಿಸಿದ್ದು, ಅವರಿಗೆ ರಾಮಣ್ಣರವರು ತಿಳಿಸಿದ್ದರು. ರಾಮಣ್ಣರವರು ನಮ್ಮ ತಾಯಿಯ ಜೊತೆಯಲ್ಲಿ ಇದ್ದರು. ರಾಮಣ್ಣರವರೇ ಕಾರನ್ನು ಚಲಾಯಿಸುತ್ತಿದ್ದರು. ಅವರು ಯಾವ ರೀತಿ ನಿಮಗೆ ಸಂಬಂಧಿಯಾಗಬೇಕು ಎಂದರೆ ಸಾಕ್ಷಿಯು ಯಾವ ರೀತಿ ಎಂದು ನನಗೆ ತಿಳಿದಿರುವುದಿಲ್ಲ, ಆದರೆ ನಮ್ಮ ಸಂಬಂಧಿ ಆಗಬೇಕು ಎಂದು ನುಡಿಯುತ್ತಾರೆ.

ನನ್ನ ತಾಯಿ ನಂಜನಗೂಡಿನಲ್ಲಿ ವಾಸಿಸುತ್ತಿದ್ದರು. ಅಪಘಾತವಾದ ಬಗ್ಗೆ ನನ್ನ ತಾಯಿಯನ್ನು ಮದ್ದೂರಿನಲ್ಲಿ ಪೊಲೀಸರು ವಿಚಾರಣೆ ಮಾಡಿರುತ್ತಾರೆ. ನನ್ನ ತಾಯಿ ದಾರವಾಡಕ್ಕೆ ದಿಃ–18.10.2023 ಕ್ಕೆ ನಂಜನಗೂಡಿನಿಂದ ಹೋಗಿರುತ್ತಾರೆ.

ಸರಸ್ವತಿ ಯಾರು ಎಂದರೆ ಅವರು ರಾಮಣ್ಣನ ಹೆಂಡತಿಯಾಗಬೇಕು. ಸದರಿ ಅಪಘಾತದಲ್ಲಿದ್ದ ಮಾರುತಿ ಸ್ವಿಫ್ಟ್ ಕಾರು ಬಾಡಿಗೆಗೆ ತೆಗೆದುಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಬಾಡಿಗೆಗೆ ತೆಗೆದುಕೊಂಡಿರುವುದಿಲ್ಲ, ಅದು ನಮ್ಮ ಸಂಬಂಧಿಕರ ವಾಹನವಾಗಿತ್ತು ಎಂದು ನುಡಿಯುತ್ತಾರೆ. ಅಪಘಾತವಾದ ದಿನ ಕಾರಿನಲ್ಲಿ ನನ್ನ ತಾಯಿ ಮತ್ತು ರಾಮಣ್ಣ ಇಬ್ಬರೇ ಇದ್ದರು. ನಿಮ್ಮ ತಾಯಿ ಅಂತ್ಯಕ್ರಿಯೇಗೆ ಹೋಗಿದ್ದರು ಎಂದು ಹೇಳಿದ್ದು, ಅಂತ್ಯಕ್ರಿಯೆ ಇದ್ದ ಸಂಬಂದಿ ಸರಸ್ವತಿರವರಿಗೂ ಸಂಬಂಧಿ ಆಗಿರುತ್ತಾರೆಯೇ? ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನನ್ನ ತಾಯಿ ನಿಶಾನೆ ಪಿ-1 ಪೊಲೀಸರ ಮುಂದೆ ನೀಡಿದ ಹೇಳಿಕೆ ಸರಿ ಇರುತ್ತದೆಯೇ? ಎಂದರೆ ಸಾಕ್ಷಿಯು ಸರಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಾಯಿಯ ಹೇಳಿಕೆಯಲ್ಲಿ ಯಾವ ಅಂಶ ಸರಿಯಾಗಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ನಿಶಾನೆ ಪಿ-1 ದಾಖಲೆಯನ್ನು ನ್ಯಾಯಾಲಯಕ್ಕೆ ಅದು ಸರಿ ಇರುತ್ತದೆ ಎಂದು ತಿಳಿದು ಹಾಜರುಪಡಿಸಿರುತ್ತಿರೋ? ಅಥವಾ ಹಾಗೆಯೇ ಹಾಜರುಪಡಿಸಿರುತ್ತೀರಿಯೋ? ಎಂದರೆ ಸಾಕ್ಷಿ ಅದು ಸರಿ ಇದೆ ಎಂದು ತಿಳಿದುಕೊಂಡು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ನನ್ನ ತಾಯಿ ಮತ್ತು ರಾಮಣ್ಣ ದಾರವಾಡದಿಂದ ಎಷ್ಟು ಗಂಟೆಗೆ ಹೊರಟಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ನಿಮ್ಮ ತಾಯಿಯ ಹೇಳಿಕೆ ಪ್ರಕಾರ ಮಧ್ಯರಾತ್ರಿ 12.15 ಗಂಟೆಗೆ ಮಂಡ್ಯದ ಮದ್ದೂರು ತಾಲ್ಲೂಕಿನ ತೊರೆ ಶೆಟ್ಟರ ಹಳ್ಳಿ ಬಳಿ ಇರುವ ಪೆಟ್ರೋಲ್ ಬಂಕ್ ಬಳಿ ಅಪಘಾತವಾಗಿರುತ್ತದೆ ಎಂದು ತಿಳಿಸಿದ್ದು, ರಾಮಣ್ಣನವರು ನಿಮಗೆ ಹೇಳಿದ ಪ್ರಕಾರ ಅದು ಸರಿಯಾಗಿರುತ್ತದೆಯೇ? ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಹೇಳಿಕೆಯಲ್ಲಿ ರಸ್ತೆಯಲ್ಲಿ ನಾಯಿ ಅಡ್ಡ ಬಂದ ಕಾರಣ ಚಲಿಸುತ್ತಿರುವ ವಾಹನವನ್ನು ಎಡಕ್ಕೆ ತಿರುಗಿಸಿದಾಗ ಮರಕ್ಕೆ ಡಿಕ್ಕಿ ಆಗಿರುತ್ತದೆ ಎಂದು ಹೇಳಿದ್ದು ಅದು ಸರಿಯಾಗಿರುತ್ತದೆಯೇ? ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ರೀತಿ ನಾಯಿ ಅಡ್ಡ ಬಂದ ಕಾರಣ ಅಪಘಾತವಾಗಿರುತ್ತದೆ ಎಂಬ ವಿಷಯವನ್ನು ಪ್ರಮಾಣಪತ್ರದಲ್ಲಾಗಲೀ ಅಥವಾ ಅರ್ಜಿಯಲ್ಲಾಗಲೀ ಹೇಳಲು ತೊಂದರೆ ಇರಲಿಲ್ಲ ಎಂದರೆ ಸರಿ. ನಾಯಿ ಅಡ್ಡ ಬರದೇ ಇದ್ದರೆ ಈ ಅಪಘಾತವಾಗುತ್ತಿರಲಿಲ್ಲ ಎಂದರೆ ಸರಿ.

ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು,ನಂತರ ನಾಗರಾಜೇಗೌಡ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದು ಅಲ್ಲಿ ಶಸ್ತ್ರಚಿಕಿತ್ಸೆ ಆಗಿ ಅವರನ್ನು ಮನೆಗೆ ಕಳುಹಿಸಿದ್ದು, ಆಗ ನಿಮ್ಮ ತಾಯಿಯವರಿಗೆ ಬಾರವನ್ನು

ಹಾಕದೆ ವಾಕರ್ ನಿಂದ ನಡೆದಾಡಬೇಕು ಎಂದು ಸಲಹೆ ನೀಡಿರುತ್ತಾರೆಯೇ? ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವೈದ್ಯರು ಆ ರೀತಿ ಸಲಹೆ ನೀಡಿದ್ದರು, ಅದನ್ನು ನಿಶಾನೆ ಪಿ–8 ರಲ್ಲಿ ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಶಾನೆ ಪಿ–7 ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿದ ಗಾಯಗಳನ್ನು ಹೊರತುಪಡಿಸಿ ನಿಮ್ಮ ತಾಯಿಗೆ ಬೇರೆ ಯಾವುದೇ ಗಾಯ ಆಗಿರಲಿಲ್ಲ ಎಂದರೆ ಸರಿ. ನಿಮ್ಮ ತಾಯಿಗೆ ಉಸಿರಾಟದ ಸಮಸ್ಯೆ ಇದೆ ಎಂದು ವೈದ್ಯಕೀಯ ದಾಖಲೆಗಳಲ್ಲಿ ಎಲ್ಲಿಯೂ ನಮೂದಿಸಿರುವುದಿಲ್ಲ, ಅದರ ಬಗ್ಗೆ ತಿಳಿದಿರುತ್ತದೆಯೇ? ಎಂದರೆ ಸಾಕ್ಷಿಯು ಅದರ ಬಗ್ಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಾಯಿಗೆ ಅಪಘಾತವಾದ 5 ದಿನದ ನಂತರ ಉಸಿರಾಟದ ಸಮಸ್ಯೆ ಆಗಿರುತ್ತದೆ ಎಂದು ಹೇಳಿದ್ದು, ಸದರಿ ಸಮಸ್ಯೆ ಅಪಘಾತದಿಂದ ಆಗಿರುತ್ತದೆ ಎಂದು ನಿಮ್ಮ ಅನುಕೂಲಕ್ಕೆ ತಕ್ಕಂತೆ ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ದಾರಿಯಲ್ಲಿ ಹೋಗುವಾಗ ಮೃತಪಟ್ಟಿರುತ್ತಾರೆಂದು ಪ್ರಮಾಣ ಪತ್ರದಲ್ಲಿ ಹೇಳಿದ್ದು, ಅವರು ಮೃತಪಟ್ಟಿರುತ್ತಾರೆ ಎಂದು ಯಾವ ವೈದ್ಯರು ದೃಡೀಕರಿಸುತ್ತಾರೆ ಎಂದರೆ ಸಾಕ್ಷಿಯು ದಾರಿಯಲ್ಲಿ ಹೋಗುವಾಗ ಅವರು ಮೃತಪಟ್ಟಿದ್ದು, ಸದರಿ ವಿಚಾರವನ್ನು ನಮಗೆ ಅಂಬ್ಯೂಲೆನ್ಸನಲ್ಲಿ ಇದ್ದವರು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವ್ಯಕ್ತಿ ವೈದ್ಯರೇ ಎಂದರೆ ಸಾಕ್ಷಿ ಅವರು ಅಂಬುಲೆನ್ಸನಲ್ಲಿ ಸಹಾಯಕರಾಗಿರುತ್ತಾರೆ ಎಂದು ನುಡಿಯುತ್ತಾರೆ.

ಸಾವಿಗೆ ಕಾರಣ ಇಂತಹದೇ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ನನ್ನ ತಾಯಿ ವಯೋಸಹಜವಾಗಿ ಸಹಜ ಸಾವು ಆಗಿರುತ್ತದೆ, ಅಪಘಾತದಲ್ಲಿ ಆದ ಗಾಯಗಳಿಗೂ

ಮತ್ತು ಅವರ ಸಾವಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ವಯಸ್ಸನ್ನು ಸೂಚಿಸಲು ಆಧಾರ್ ಕಾರ್ಡ್ ಬಿಟ್ಟು ಬೇರೆ ಯಾವುದೇ ದಾಖಲೆ ಇರುವುದಿಲ್ಲ.

ನಾನು ನೀಡಿದ ನಿಶಾನೆ ಪಿ-9 ಅರ್ಜಿಯನ್ನು ಪರಿಗಣಿಸಿ ದೋಷಾರೋಪಣಾ ಪಟ್ಟಿಯಲ್ಲಿ ಬದಲಾವಣೆ ಮಾಡಿರುತ್ತಾರೆಯೇ? ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ನೀಡಿದ ನಿಶಾನೆ ಪಿ-9ರ ಅರ್ಜಿಯ ಮೇಲೆ ತನಿಖೆ ಮಾಡಿರುತ್ತಾರೆಯೇ? ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈ ರೀತಿ ತನಿಖೆ ಮಾಡಿರುವುದಿಲ್ಲ, ತನಿಖೆ ಮಾಡಬೇಕು ಎಂದು ಹೇಳಿ ಪೊಲೀಸರ ಮೇಲಾಧಿಕಾರಿಯವರಿಗೆ ಅರ್ಜಿ ಸಲ್ಲಿಸಿರುತ್ತೀರಿಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಶಾನೆ ಪಿ-9ನ್ನು ಈ ಪ್ರಕರಣಕೋಸ್ಕರ ನಿಮಗೆ ಅನುಕೂಲವಾಗಲಿ ಎಂದು ತಯಾರಿಸಿದ್ದು, ನಿಮ್ಮ ತಾಯಿ ಸಾವು ಸಹಜ ಸಾವು ಅಪಘಾತದಿಂದ ಆಗಿರುವುದಿಲ್ಲ ಎಂದು ತಿಳಿದಿದ್ದರಿಂದ ನಾನು ನಿಶಾನೆ ಪಿ-9ರ ಮೇಲೆ ಕ್ರಮ ಕೈಗೊಳ್ಳುವಂತೆ ಯಾವುದೇ ಮುಂದಿನ ಕ್ರಮವನ್ನು ಅನುಸರಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ನಮ್ಮ ತಾಯಿಯ ಮರಣೋತ್ತರ ಪರೀಕ್ಷೆಯನ್ನು ಸಹ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಮದುವೆ ಮೇ-2016ರಲ್ಲಿ ಆಗಿರುತ್ತದೆ. ಆದಾದ ನಂತರ ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಿದ ನಿಮ್ಮ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿರುತ್ತೀರಿಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನೀವು ಮೈಸೂರಿನ ಶ್ರೀರಾಮಪುರದಲ್ಲಿ ಯಾವಾಗಿನಿಂದ ವಾಸವಾಗಿದ್ದೀರಿ? ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನೀವು ಮೈಸೂರಿನ ಶ್ರೀರಾಮಪುರದಲ್ಲಿ ವಾಸವಿರುತ್ತೀರಿ ಎಂದು

ತೋರಿಸಲು ದಾಖಲೆ ಇರುತ್ತದೆಯೇ? ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.ನಾನು ಮದುವೆಯಾದಾಗಿನಿಂದ ಚನ್ನಪಟ್ಟಣದಲ್ಲಿ ವಾಸವಿದ್ದು, ಈ ಕೇಸಿಗೋಸ್ಕರ ಶ್ರೀರಾಮಪುರದಲ್ಲಿ ವಾಸವಿರುತ್ತೇನೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಆಧಾರ್ ಕಾರ್ಡಿನಲ್ಲಿ ಚನ್ನಪಟ್ಟಣದ ವಿಳಾಸ ಇರುತ್ತದೆ ಎಂದರೆ ಸರಿ.

ನನ್ನ ಗಂಡ ಸಣ್ಣ ವ್ಯಾಪಾರ ಮಾಡಿಕೊಂಡಿರುತ್ತಾರೆ. ನನ್ನ ತಾಯಿಗೆ ನಾನು ಬಿಟ್ಟು ಬೇರೆ ಮಕ್ಕಳು ಇರುವುದಿಲ್ಲ. ನನ್ನ ತಂದೆ ದೇವಸ್ಥಾನದಲ್ಲಿ ಕೆಲಸ ಮಾಡಿ ಸಂಪಾದನೆ ಮಾಡುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ತಾಯಿ ಟೈಲರಿಂಗ್ ಮಾಡಿ 30,000 ರೂ. ತಿಂಗಳಿಗೆ ವರಮಾನ ಇತ್ತು ಎಂದು ಹೇಳಿದ್ದು, ಅದನ್ನು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ನನ್ನ ತಾಯಿ ಗೃಹಿಣಿಯಾಗಿದ್ದು ಯಾವುದೇ ಸಂಪಾದನೆ ಮಾಡುತ್ತಿರಲಿಲ್ಲ ಎಂದರೆ ಸರಿ. ನನ್ನ ತಾಯಿಗೆ ಟೈಲರಿಂಗ್ ನಲ್ಲಿ ಪರಿಣಿತಿ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ನನ್ನ ತಾಯಿ ಟೈಲರಿಂಗ್ ಕೆಲಸ ಮಾಡುತ್ತಿದ್ದರು ಮತ್ತು 30,000 ರೂ. ವರಮಾನವಿತ್ತು ಎಂದು ಹೆಚ್ಚಿನ ಪರಿಹಾರ ಪಡೆಯಲು ತಪ್ಪಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಗ ಯಾವುದೇ ಸಂಪಾದನೆ ಇಲ್ಲದ ಕಾರಣ ನಾನು ಮತ್ತು ನನ್ನ ತಂದೆ ನನ್ನ ತಾಯಿಯ ಮೇಲೆ ಅವಲಂಬಿತವಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಮೇಲೆ ನಾವು ಅವಲಂಬಿತರಾಗಿದ್ದೆವು ಎಂದು ಪರಿಹಾರ ಪಡೆಯಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ದಿನ ನಿಮ್ಮ ತಾಯಿ ಸೀಟ್ ಬೆಲ್ಟ್ ಹಾಕಿಕೊಂಡಿದ್ದರೆ ಅಪಘಾತದಲ್ಲಿ ಅವರಿಗೆ ಗಾಯವಾಗುತ್ತಿರಲಿಲ್ಲ ಎಂದರೆ ಸಾಕ್ಷಿಯು ರಾಮಣ್ಣರವರು ನನ್ನ ತಾಯಿಗೆ ಸೀಟ್ ಬೆಲ್ಟ್ ಹಾಕಲು ಹೇಳಿದ್ದರು ಸಹ ನನ್ನ ತಾಯಿ ಸೀಟ್ ಬೆಲ್ಟ್ ಹಾಕಿರುವುದಿಲ್ಲ ಎಂಬ ವಿಚಾರ ತಿಳಿದುಬಂದಿರುತ್ತದೆ.

ಅಪಘಾತದಲ್ಲಿ ರಾಮಣ್ಣನವರ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಸಾವು ಸಹಜ ಸಾವು ಆದ್ದರಿಂದ ನಾವು ಯಾವುದೇ ಪರಿಹಾರ ಪಡೆಯಲು ಅರ್ಹರಾಗಿರುವುದಿಲ್ಲ ಎಂದರೆ ಸರಿಯಲ್ಲ.

ನಿಶಾನೆಪಿ-1 ರಲ್ಲಿ ಹೇಳಿರುವಂತೆ ಸರಸ್ವತಿರವರು ನಿಮ್ಮ ತಾಯಿಯ ಸ್ನೇಹಿತರಾಗಿದ್ದು, ನಿಮಗೆ ಸಂಬಂಧಿಕರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಅಪಘಾತದಲ್ಲಿ ಇದ್ದ ಸ್ವಿಫ್ಟ್ ಕಾರನ್ನು ಬಾಡಿಗೆಗೆ ತೆಗೆದುಕೊಂಡು ಹೋಗಿದ್ದು, 2 ನೇ ಎದುರುದಾರರಿಂದ ಪರಿಹಾರ ಪಡೆಯಲು ಸಂಬಂಧಿಕರ ಕಾರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-ಇಲ್ಲ**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮತ್ತು ಎಮ್.ಎ.ಸಿ.ಟಿ.ಮೈಸೂರು